# ಸಮಗ್ರ ಲೈಂಗಿಕತೆಯ ಶಿಕ್ಷಣ | ಸಾಧ್ಯತೆಗಳ ಕಾಮನಬಿಲ್ಲು

ಇಶಾ ಬಡ್ಕಸ್

ಅನುಭವ

ನಾನು ಶಾಲೆಯಲ್ಲಿ ಕಳೆದ ವರ್ಷಗಳತ್ತ ಹಿಂದಿರುಗಿ ನೋಡಿದಾಗ, ನನ್ನ ಸುತ್ತಲಿನ ಜಗತ್ತನ್ನು ವ್ಯಾಖ್ಯಾನಿಸಲು ಚರಿತ್ರೆ, ವಿಜ್ಞಾನ, ಗಣಿತ ಮೊದಲಾದ ವಿಷಯಗಳು ಅನೇಕ ದೃಷ್ಟಿಕೋನಗಳನ್ನು ತೆರೆದಿಟ್ಟವು ಎಂಬುದು ನನಗೆ ಮನವರಿಕೆಯಾಗುತ್ತದೆ. ಕೆಲವೊಮ್ಮೆ ಆ ಪರಿಕಲ್ಪನೆಗಳನ್ನು ಕಲಿಯುವುದರಲ್ಲಿ ಖುಷಿಯಿತ್ತು ಮತ್ತು ಕೆಲವೊಮ್ಮೆ ಅವುಗಳನ್ನು ಸುಮ್ಮನೆ ಉರುಹೊಡೆದಿದ್ದೆ! ಈಗ ಹಿಂದಿರುಗಿ ನೋಡಿದರೆ, ನನ್ನೊಳಗಿರುವ ಜಗತ್ತನ್ನು ಗುರುತಿಸಿ, ವ್ಯಾಖ್ಯಾನಿಸುವುದಕ್ಕೆ ನಾನು ಗಮನ ಕೊಡಲಿಲ್ಲ ಎಂದು ಅನ್ನಿಸುತ್ತಿದೆ. ನಾನು ಬೆಳೆಯುತ್ತಾ ಹೋದ ದಿನಗಳಲ್ಲಿ ನನಗೆ ನನ್ನ ದೇಹದ ಬಗ್ಗೆ, ಅದು ಹೇಗೆ ಕಾಣುತ್ತದೆ ಮತ್ತು ಅನೇಕ ಸಂಕೀರ್ಣ ಭಾವನೆಗಳ ಬಗ್ಗೆ ನನಗೆ ಬೇಕಾದಷ್ಟು ಪ್ರಶ್ನೆಗಳಿದ್ದವು. ಆದರೆ ಏಕೋ ಏನೋ ನನಗೆ ಇವುಗಳೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗಲೇ ಇಲ್ಲ. ತಿಂಗಳಿಗೊಮ್ಮೆ ಋತುಸ್ರಾವವಾದಾಗ ನನಗೆ ಏನಾಗುತ್ತದೆ ಎಂಬುದನ್ನು, ಮತ್ತೆ ಹೊಸಬರನ್ನು ಭೇಟಿಯಾದಾಗ ನಾನೇಕೆ ಆತಂಕಕ್ಕೊಳ-ಗಾಗುತ್ತೇನೆ ಮತ್ತು ಕೋಪ ಅಥವಾ ದುಃಖದ ಅನುಭವ ನನಗೆ ಹೇಗೆ ಆಗುತ್ತದೆ ಎಂಬುದನ್ನು ನಾನು ಪರಿಶೋಧಿಸಿಕೊಂಡದ್ದು ತೀರಾ ಇತ್ತೀಚಿಗೆ, ಈ ಶೋಧನೆಯಲ್ಲಿ ನನಗನ್ನಿಸಿದ್ದು ನನ್ನನ್ನೇ ಅರಿತುಕೊಳ್ಳುವ ಈ ಪ್ರಕ್ರಿಯೆ ಬೇಗನೇ ಪ್ರಾರಂಭವಾಗಬೇಕಿತ್ತು ಎಂದು. ಶಾಲಾ ಆರಂಭಿಕ ವರ್ಷಗಳಿಂದಲೇ ನಮ್ಮ ದೇಹ ಮತ್ತು ಭಾವನೆಗಳನ್ನು ಒಳಗೊಂಡ ಸಂವಾದಕ್ಕೆ ನಮ್ಮ ಶಾಲಾ ಪಠ್ಯಕ್ರಮವು ಅವಕಾಶಗಳನ್ನು ಸೃಷ್ಟಿಸಲು ಮುಂದೊಡಗಬೇಕೆಂದು ನಾನು ಬಲವಾಗಿ ನಂಬುತ್ತೇನೆ.ಸಮಗ್ರ ಲೈಂಗಿಕತೆಯ ಶಿಕ್ಷಣ (Comprehensive Sexuality Education - CSE)) ವಿಷಯದ ಕುರಿತು ಇತ್ತೀಚೆಗೆ, ಪುಣೆಯ ಅಕ್ಷರನಂದನ್ ಶಾಲೆಯ 5ನೇ ತರಗತಿಯ ವಿದ್ಯಾರ್ಥಿಗಳ ಜೊತೆ ನಾನು ತೊಡಗಿಕೊಂಡ ಸಣ್ಣ ಅನುಭವವೇ ಈ ಲೇಖನ. ಸಾಧಾರಣವಾಗಿ ಯಾರೂ ವಿದ್ಯಾರ್ಥಿಗಳಿಗೆ ವಿವರಿಸದ, ವಿದ್ಯಾರ್ಥಿಗಳು ಮಾತನಾಡುವ, ಪ್ರಶ್ನೆ ಕೇಳುವ ಅನೇಕ ವಿಷಯಗಳು, ಅವರ ದೇಹದ ಕುರಿತಾದ ಕುತೂಹಲಗಳು, ಭಾವನೆಗಳು, ಅವರ ಸುತ್ತಲೂ ನಡೆಯುವ ಅನೇಕ ಘಟನೆಗಳು ಇವೆಲ್ಲವುಗಳಿಗೆ ಸುರಕ್ಷಿತವಾದ, ಮುಕ್ತವಾದ ಅವಕಾಶವನ್ನು ಸೃಷ್ಟಿಸಬೇಕಾದ ಪ್ರಾಮುಖ್ಯತೆ ಬಗ್ಗೆ ಕೂಡ ಇದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

## ಸಮಗ್ರ ಲೈಂಗಿಕತೆಯ ಶಿಕ್ಷಣ ಎಂದರೇನು?

ಸಮಗ್ರ ಲೈಂಗಿಕತೆಯ ಶಿಕ್ಷಣವು, ಲೈಂಗಿಕತೆಯ ಬಗ್ಗೆ ಒಂದು ಸಮಗ್ರ ದೃಷ್ಟಿಕೋನವನ್ನು ಮುಂದಿಡುತ್ತದೆ. ನಮ್ಮ ಗ್ರಹಿಕೆಗಳನ್ನು ಪರಿಶೋಧಿಸಲು, ಕಲ್ಪಿಸಿಕೊಳ್ಳಲು ಮತ್ತು ಬಹಳ ಮುಖ್ಯವಾಗಿ ಪ್ರಶ್ನಿಸಲು, ಮಾಹಿತಿಯನ್ನು ಕೌಶಲವನ್ನು ಮತ್ತು ಹಂಚಿಕೊಳ್ಳುವ ಅವಕಾಶಗಳನ್ನೂ ಸೃಷ್ಟಿಸುತ್ತದೆ! 'ಲೈಂಗಿಕತೆಯನ್ನು ಆಲೋಚನೆಯಲ್ಲಿ, ಕಲ್ಪನೆಗಳಲ್ಲಿ, ಆಸೆಗಳಲ್ಲಿ, ನಂಬಿಕೆಗಳಲ್ಲಿ, ಧೋರಣೆಗಳಲ್ಲಿ, ಮೌಲ್ಯಗಳಲ್ಲಿ, ವರ್ತನೆಗಳಲ್ಲಿ, ಆಚಾರ-ವಿಚಾರಗಳಲ್ಲಿ, ಕರ್ತವ್ಯಗಳಲ್ಲಿ ಮತ್ತು ಸಂಬಂಧಗಳಲ್ಲಿ ಅನುಭವಿಸಲಾಗುತ್ತದೆ ಮತ್ತು ಅಭಿವ್ಯಕ್ತಿಸಲಾಗುತ್ತದೆ. ಜೈವಿಕ, ಮನೋ-ವೈಜ್ಞಾನಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಕಾನೂನಾತ್ಮಕ, ಚಾರಿತ್ರಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಅಂಶಗಳು ಲೈಂಗಿಕತೆಯ ಮೇಲೆ ಪ್ರಭಾವ ಬೀರುತ್ತವೆ'. (ವಿಶ್ವ ಆರೋಗ್ಯ ಸಂಸ್ಥೆಯ ಕರಡು ವ್ಯಾಖ್ಯಾನದ ಕಿರು ಆವೃತ್ತಿ, 2006). ಸಮಗ್ರ ಲೈಂಗಿಕತೆಯ ಶಿಕ್ಷಣವನ್ನು ನಾವು, ಪಠ್ಯಕ್ರಮದ ಶೈಕ್ಷಣಿಕ ಭಾಗದ ವಿವಿಧ ಕಲಿಕಾ ವಿಷಯಗಳಲ್ಲಿ ಸೇರಿರುವ ವಿಭಿನ್ನ ಭಾಗಗಳು ಮತ್ತು ವಸ್ತುಗಳಿಂದ ಹೊರಹೊಮ್ಮುವ ಘಟಕ ಎಂಬಂತೆ ಕಾಣಬೇಕು. ಉದಾಹರಣೆಗೆ, ವಿದ್ಯಾರ್ಥಿಗಳು ತಮ್ಮ ಪಠ್ಯಪುಸ್ತಕಗಳಿಂದ ದೇಹದ ವಿಭಿನ್ನ ಭಾಗಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಇಲ್ಲಿ ಸಮಗ್ರ ಲೈಂಗಿಕತೆಯ ಶಿಕ್ಷಣದ ಘಟಕವು ದೇಹಗಳಲ್ಲಿ ಹೇಗೆ ವಿವಿಧ ಆಕಾರಗಳಿರುತ್ತವೆ ಮತ್ತು ಸಿದ್ಧಮಾದರಿಯೆನ್ನುವ ಯಾವುದೇ ಒಂದು ದೇಹಾಕಾರ ಅಥವಾ ಗಾತ್ರ ಎಂಬುದಿಲ್ಲ ಎಂಬ ಬಗ್ಗೆ ಚರ್ಚೆಯನ್ನು ಆರಂಭಿಸಬಹುದು. ಆ ಮೂಲಕ ನಮ್ಮ ದೇಹಗಳು ಹೇಗೆ ಇವೆಯೋ ಹಾಗೆಯೇ ಅವುಗಳನ್ನು ಗುರುತಿಸುವ, ಅಂಗೀಕರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುವುದಲ್ಲದೆ ನಮ್ಮ ಸುತ್ತಲೂ ಬಲವಾಗಿ ಬೇರು ಬಿಟ್ಟಿರುವ ಸಿದ್ಧಮಾದರಿಗಳ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸಬಹುದು.

## ಆರಂಭಿಕ ವರ್ಷಗಳಲ್ಲಿ

ಆರಂಭಿಕ ವರ್ಷಗಳಲ್ಲಿ ಮಕ್ಕಳು ತಮ್ಮ ಪೋಷಕರು ಮತ್ತು ಹತ್ತಿರದ ಪರಿಚಿತರ ನೆರವಿನೊಂದಿಗೆ ಜಗತ್ತನ್ನು ಅರ್ಥ ಮಾಡಿಕೊಳ್ಳುತ್ತಾರೆ. ತಾವು ಹೊಂದಿರುವ ವಿಭಿನ್ನ ಅಸ್ಮಿತೆಗಳ ಬಗ್ಗೆ ಅವರು ಸಂಜ್ಞೆಗಳನ್ನು, ಸಂಕೇತಗಳನ್ನು, ಸುಳಿವುಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತಾರೆ. ವಿದ್ಯಾರ್ಥಿಗಳು ಐದನೆಯ ತರಗತಿಗೆ ಬರುವವರೆಗೂ ಸಾಮಾಜೀಕರಣದ (socialisation) ವಿವಿಧ ಪದರಗಳ ಮೂಲಕ ಹಾದು ಬಂದಿರುತ್ತಾರೆ ಮತ್ತು ಇದು ಮುಂದುವರಿಯುತ್ತಲೇ ಇರುತ್ತದೆ. ಸಾಮಾಜೀಕರಣದ ಮಧ್ಯವರ್ತಿಗಳು, ಅದರಲ್ಲೂ ಮುಖ್ಯವಾಗಿ ಮಾಧ್ಯಮ ಮತ್ತು ಫ್ಯಾಷನ್ ಮಾರುಕಟ್ಟೆಗಳು ಒಂದು ಶಾರೀರಿಕ ಮಾದರಿಯನ್ನು "ಆದರ್ಶ" ('ideal') ಎಂದು, ಒಂದು ನಡವಳಿಕೆಯ ಶೈಲಿಯನ್ನು "ಶ್ರೇಷ್ಠ" ('ideal') ಎಂದು ನಿಗದಿ ಮಾಡುತ್ತವೆ. ಇದರಿಂದಾಗಿ ಈ ಮಾನದಂಡಗಳಿಗೆ ಸರಿಹೊಂದದ ಮಕ್ಕಳು ತಮ್ಮನ್ನು ತಾವು ಹೇಗಿದ್ದಾರೋ ಹಾಗೇ ಒಪ್ಪಿಕೊಳ್ಳದಂತೆ ತಡೆಯುತ್ತದೆ. ನಮ್ಮ ಕುಟುಂಬದ ಎದುರಿನಲ್ಲಿ ಸಹ ನಾವು ನಮ್ಮ ದೇಹದ ಬಗ್ಗೆ, ಭಾವನೆಗಳ ಬಗ್ಗೆ ಮಾತನಾಡಲು ಸಾಧ್ಯವಾಗದೆ ಅದು ನಿಷೇಧಿತ ವಲಯಕ್ಕೆ ಸೇರಿರುವುದರಿಂದ, ನಮ್ಮ ದೈಹಿಕ ಅನುಭವಗಳ ಬಗ್ಗೆ, ಅನನುಕೂಲಗಳ ಬಗ್ಗೆ, ಸಂತೋಷಗಳ ಬಗ್ಗೆ ಮತ್ತು ಲೈಂಗಿಕ ದೌರ್ಜನ್ಯಗಳ ಬಗ್ಗೆ ಸಹ ಮಾತನಾಡಲು ಸೂಕ್ತ ಪದಗಳ ಅಭಾವವಿರುತ್ತದೆ.

## ಸಂವಾದವನ್ನು ಆರಂಭಿಸಲು ಕಥೆ ಹೇಳುವುದು

ನಾನು ಒಂದು ಸುರುಳಿಯಂತಿರುವ ಸಮಗ್ರ ಲೈಂಗಿಕತೆಯ ಶಿಕ್ಷಣದ ಚೌಕಟ್ಟನ್ನು ಅಭಿವೃದ್ಧಿಪಡಿಸುತ್ತಿದ್ದೇನೆ ಮತ್ತು ಅದು ಶಿಕ್ಷಣದ ಆರಂಭಿಕ ವರ್ಷಗಳಿಂದಲೇ ಔಪಚಾರಿಕ ಪಠ್ಯಕ್ರಮದ ಸಕ್ರಿಯ ಭಾಗವಾಗಿರಬೇಕೆಂದು ಪ್ರತಿಪಾದಿಸುತ್ತದೆ. ಅದೇನೇ ಇರಲಿ ಈ ಚೌಕಟ್ಟನ್ನು ತರಗತಿ ವ್ಯವಸ್ಥೆಯೊಳಗೆ ಪ್ರಯೋಗಿಸದಿದ್ದರೆ ಅವಶ್ಯಕವಾದ ಪರಿಷ್ಕರಣೆ ಮತ್ತು ಸಂದರ್ಭಕ್ಕೆ ತಕ್ಕಂತೆ ಅಳವಡಿಸುವುದು ಕಷ್ಟವಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಂಡು, ಈ ಯೋಜನೆಯನ್ನು ಅಕ್ಷರಾನಂದನ್ ಶಾಲೆಗೆ ತೆಗೆದುಕೊಂಡು ಹೋಗಲಾಯಿತು. ಈ ಶಾಲೆಯು 1992ರಲ್ಲಿ ಆರಂಭವಾಗಿರುವ, ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನರಹಿತ ಸಂಸ್ಥೆಯಾಗಿದ್ದು, ಇದರಲ್ಲಿ ಶಿಶುವಿಹಾರದಿಂದ ಹಿಡಿದು 10 ರವರೆಗೂ ತರಗತಿಗಳಿವೆ. ಪ್ರತಿಯೊಂದು ತರಗತಿಯಲ್ಲೂ ಕೇವಲ 40 ವಿದ್ಯಾರ್ಥಿಗಳು ಇದ್ದಾರೆ. ಶಾಲೆಯು ರಾಜ್ಯ ಶಿಕ್ಷಣ ಮಂಡಳಿಯ ಔಪಚಾರಿಕ ಚೌಕಟ್ಟನ್ನು ಅನುಸರಿಸುತ್ತಾದರೂ ಅದು, ಪಠ್ಯಕ್ರಮವು ಪ್ರಸ್ತುತವಾಗಿರುವಂತೆ ಮತ್ತು ವಾಸ್ತವ ಬದುಕಿನೊಂದಿಗೆ ಬೆಸೆದುಕೊಂಡಿರುವಂತೆ ಸೃಜನಶೀಲ ಕಾರ್ಯಚಟುವಟಿಕೆಗಳನ್ನು ಅಳವಡಿಸಿಕೊಂಡಿದೆ. ನಾನು ಪ್ರತಿತಿಂಗಳೂ 5 ರಿಂದ 9 ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ತೊಡಗಿಕೊಳ್ಳುತ್ತೇನೆ. ಹಿರಿಯ ವಿದ್ಯಾರ್ಥಿಗಳೊಂದಿಗೆ ನಾನು ಹೆಚ್ಚು ನೇರವಾಗಿ ಮಾತುಕತೆಯನ್ನು ಆರಂಭಿಸುತ್ತೇನೆ. ಆದರೆ 5ನೆಯ ತರಗತಿಯ ವಿದ್ಯಾರ್ಥಿಗಳೊಂದಿಗೆ ಸಂಕೀರ್ಣ ಸಾಮಾಜಿಕ ಸಂಬಂಧಗಳನ್ನು ಕುರಿತು ಸಂವಾದ ನಡೆಸಲು ಮತ್ತು ಭಾವನೆಗಳ ಕುರಿತು ಚಿಂತಿಸುವಂತೆ ಮಾಡಲು ಕಥೆ ಹೇಳುವಿಕೆಯ ಕ್ರಮವನ್ನು ಅನುಸರಿಸುತ್ತೇನೆ.

ಜಾಮ್ಲೋ ಚಲ್ತೀ ಗಯಿ: ಸಮೀನಾ ಮಿಶ್ರಾ ಅವರ 'ಜಾಮ್ಲೋ ಚಲ್ತೀ ಗಯಿ' ಎಂಬ ಕಥೆ ಪುಸ್ತಕದೊಂದಿಗೆ ನಾನು 5ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ನನ್ನ ಮಾತುಕತೆಯನ್ನು ಆರಂಭಿಸಬೇಕೆಂದು ನಿರ್ಧರಿಸಿದೆ. ಕೋವಿಡ್ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ವಿಭಿನ್ನ ಸಾಮಾಜಿಕ ಹಿನ್ನೆಲೆಗಳಿಂದ ಬಂದ ಮಕ್ಕಳ ಪರಿಸ್ಥಿತಿಗಳು ಹೇಗೆ ಬೇರೆಬೇರೆಯಾಗಿದ್ದವು ಎಂಬುದನ್ನು ಹೇಳುವ ನೈಜ ಕಥೆ ಅದು. ಕಥೆಯ ಮುಖ್ಯ ಪಾತ್ರಧಾರಿಯಾದ, ತೆಲಂಗಾಣದ ಮೆಣಸಿನಕಾಯಿ ಹೊಲದಲ್ಲಿ ಕೆಲಸ ಮಾಡುವ ಜಾಮ್ಲೋ, ಕೋವಿಡ್ ಮಹಾರೋಗದ ಸಂದರ್ಭದಲ್ಲಿ ನೂರಾರು ಜನ ಗಂಡಸರು, ಹೆಂಗಸರು ಮತ್ತು ಮಕ್ಕಳೊಂದಿಗೆ ಊರಿನತ್ತ ನಡೆಯುತ್ತಿದ್ದಾಳೆ. ಈ ದೃಶ್ಯವನ್ನು ತಾರಾ ಟಿವಿಯಲ್ಲಿ ನೋಡುತ್ತಿದ್ದಾಳೆ. ಇನ್ನೊಂದೆಡೆ ರಸ್ತೆಯಲ್ಲಿ ರಾಹುಲನು ಇಡಿಯ ವಸತಿ ಪ್ರದೇಶ ಮೌನವಾಗುವುದನ್ನು ನೋಡುತ್ತಿದ್ದರೆ, ಜೂಮ್ ನಲ್ಲಿ ಆನ್ಲೈನ್ ಶಾಲೆಗೆ ಹಾಜರಾಗುತ್ತಿರುವ ಆಮಿರ್, ತನಗೆ ತನ್ನ ಶಿಕ್ಷಕರು ಮತ್ತು ತರಗತಿಯ ವಾತಾವರಣ ಸಿಗದಿರುವುದರಿಂದ ಬೇಸರ–ಗೊಂಡಿದ್ದಾನೆ. ಈ ಕಥೆ ಬಾಲ್ಯ ಮತ್ತು ಬಾಲ್ಯದ ಅನುಭವಗಳಲ್ಲಿ ಇರುವ ವೈವಿಧ್ಯತೆಯನ್ನು ಗುರುತಿಸಲು ಅವಕಾಶ ಮಾಡಿಕೊಟ್ಟಿತು.

ಆರಂಭದಲ್ಲಿ ಮಕ್ಕಳಿಗೆ ಜಾಮ್ಲೋಳ ಸಾಮಾಜಿಕ ವಾಸ್ತವವನ್ನು ಗ್ರಹಿಸಲು ಸಾಧ್ಯವಾಗಲಿಲ್ಲ, ಏಕೆಂದರೆ ತಮ್ಮ ವಯಸ್ಸಿನ ಮಗುವೊಂದು ವಲಸೆ ಕಾರ್ಮಿಕಳಾಗಿರಬಹುದು ಎಂಬುದು ಅವರ ಕಲ್ಪನೆಯನ್ನೂ ಮೀರಿತ್ತು. ಕಥೆಯಲ್ಲಿ ಬರುವ ನಾಲ್ಕು ಪಾತ್ರಗಳು ವಿಭಿನ್ನ ಸಾಮಾಜಿಕ ಹಿನ್ನೆಲೆಗಳಿಂದ ಬಂದಿದ್ದಾರೆ ಮತ್ತು ಅದರಿಂದಾಗಿ ಅವರ ಸಾಮಾಜಿಕ ಭದ್ರತೆ ಮತ್ತು ಅವರಿಗೆ ಸಂಪನ್ಮೂಲಗಳು ಸಿಗುವ ಅವಕಾಶ ಎಲ್ಲವೂ ಬೇರೆಬೇರೆಯಾಗಿರುತ್ತವೆ ಎಂಬುದನ್ನು ಅರ್ಥ ಮಾಡಿಸಲು ನಮಗೆ ಸ್ವಲ್ಪ ಸಮಯ ಬೇಕಾಯಿತು. ಶಾಲೆಯು ನಗರ ಪ್ರದೇಶದಲ್ಲಿರುವುದರಿಂದ ಮತ್ತು ಬಹುತೇಕ ವಿದ್ಯಾರ್ಥಿಗಳು ಸುಭದ್ರ ಆರ್ಥಿಕ ಹಿನ್ನೆಲೆಗಳಿಂದ ಬಂದಿರುವುದರಿಂದ ಜಾಮ್ಲೋಳ ವಾಸ್ತವತೆ ಮತ್ತು ಸವಾಲುಗಳಿಗೆ ಸ್ಪಂದಿಸುವುದು ಅವರಿಗೆ ಸುಲಭವಾಗಿರಲಿಲ್ಲ. ಈ ತರಗತಿ ಚರ್ಚೆಯ ಸಂದರ್ಭದಲ್ಲಿ ನನಗೆ ಎರಡು ಸಂಗತಿಗಳು ಹೊಳೆದವು. ಮೊದಲನೆಯದಾಗಿ, ವಾಸ್ತವಿಕತೆಯನ್ನು ಹೆಚ್ಚು ನೈಜವಾಗಿ ಪ್ರತಿಬಿಂಬಿಸುವುದನ್ನು

ಖಚಿತಪಡಿಸಲು ವಿಶಾಲ ವ್ಯಾಪ್ತಿಯಲ್ಲಿ ಅನುಭವ ಹಾಗೂ ದೃಷ್ಟಿಕೋನಗಳನ್ನು ಪ್ರತಿನಿಧಿಸುವ, ವಿವಿಧ ಸಾಮಾಜಿಕ ಪರಿಸ್ಥಿತಿಗಳ ಕಥನಗಳು ಬಹಳಷ್ಟು ಅವಶ್ಯಕ. ಎರಡನೆಯದಾಗಿ, ಈ ಕಥನದ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸಲು ಈ ಕಥೆಗಳನ್ನು ಮಕ್ಕಳೊಂದಿಗೆ ಓದುವುದು ಅಷ್ಟೇ ಮುಖ್ಯವಾದದ್ದು. ಕೆಲವೊಮ್ಮೆ ಕಥೆಗಳು ಪರಿಚಯವಾಗಿರುವ, ಸ್ಪಂದಿಸಲು ಸಾಧ್ಯವಾಗುವ ಜಗತ್ತಿನ ನೋಟವನ್ನು ಒದಗಿಸಬಲ್ಲ ಕನ್ನಡಿಗಳಂತಿರುತ್ತವೆ. ಕೆಲವೊಂದು ಸಂದರ್ಭಗಳಲ್ಲಿ, ಅವು ಜಗತ್ತಿನ ಅಪರಿಚಿತ ವಿಷಯಗಳ ಬಗ್ಗೆ, ಘಟಕಗಳ ಬಗ್ಗೆ ಕಣ್ಣೋಟ ಹರಿಸಲಾಗುವಂತೆ ಕಿಟಕಿಗಳಾಗುತ್ತವೆ. ನಮಗೆಲ್ಲರಿಗೂ ವಿಭಿನ್ನ ಅಸ್ಮಿತೆಗಳಿವೆ,



**ಚಿತ್ರ 1. ಜಾಮ್ಲೋ ಚಲ್ತೀ ಗಯಿ-ಕಥೆ ಓದುತ್ತಿರುವುದು**

ಅದರಲ್ಲಿ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸಂರಚನೆಗಳಿಂದ ನಮಗೆ ಬಂದಂಥವು; ಉದಾ: ಜಾತಿ, ಲಿಂಗ, ವರ್ಗ, ಧರ್ಮ ಇತ್ಯಾದಿ. ನಮ್ಮ ದೈನಂದಿನ ಆಯ್ಕೆಗಳು ಮತ್ತು ಅದೇ ರೀತಿಯಲ್ಲಿ ಅನುಭವಗಳನ್ನು ನಿರ್ಧರಿಸುವಲ್ಲಿ ಅವೆಲ್ಲವೂ ತಮ್ಮ ಪಾತ್ರವನ್ನು ನಿರ್ವಹಿಸುತ್ತವೆ. ಇದು ತರಗತಿಯೊಳಗೂ ಅನ್ವಯಿಸುವಂಥದ್ದು. ಇಲ್ಲಿಯೇ ಶಿಕ್ಷಕರಾಗಿ ಅಥವಾ ಸುಗಮಕಾರರಾಗಿ ನಮ್ಮ ಪಾತ್ರ ಬರುವುದು –ನಮ್ಮ ಬದುಕನ್ನು ನಿರ್ಮಿಸುವ ಸಾಮಾಜಿಕ, ಮಾನಸಿಕ ಮತ್ತು ರಾಜಕೀಯ ಅಂಶಗಳನ್ನು ನಿರ್ವಹಿಸುವಲ್ಲಿ ಮಾರ್ಗದರ್ಶಕರಾಗುವುದು.

'ಬರಸ್ತಾ ತರ್ಬೂಜ್' (Barasta Tarbooz) ಎಂಬ ಕ್ವೆಂಟೆನ್ ಗ್ರೆಬಾನ್ ಎಂಬುವವರು ಬರೆದು, ಚಿತ್ರವನ್ನೂ ರಚಿಸಿರುವ ಎರಡನೇ ಕಥೆಯಲ್ಲಿ ಸಾಸೊ ಎಂಬ ಮುಖ್ಯ ಪಾತ್ರಧಾರಿಯು ತಾನು ಪ್ರೀತಿಸಿದ ಹುಡುಗಿಯನ್ನು ಭೇಟಿಯಾಗಲು ಪ್ರಯಾಣ ಮಾಡುತ್ತಿದ್ದಾನೆ. ಅವನು ತನ್ನ ಪ್ರಿಯತಮೆಗೆ ಹತ್ತು ಕಲ್ಲಂಗಡಿ ಹಣ್ಣುಗಳನ್ನು ಉಡುಗೊರೆಯಾಗಿ ತೆಗೆದುಕೊಂಡು ಹೊರಟಿದ್ದಾನೆ ಮತ್ತು ಅವನ ಜೊತೆಯಲ್ಲಿ ಒಂದು ಹಸು, ಒಂದು ಒಂಟೆ ಮತ್ತು ಒಂದು ಆನೆಗಳೂ ಪ್ರಯಾಣ ಮಾಡುತ್ತಿವೆ. ದಾರಿಯಲ್ಲಿ ಸಾಸೊ ತಾನು ಮತ್ತು ತನ್ನ ಪ್ರಿಯತಮೆ ಭೇಟಿಯಾದಾಗ ಏನು ಮಾಡಬಹುದು ಎಂಬ ಬಗ್ಗೆ ಕನಸು ಕಾಣಲಾರಂಭಿಸುತ್ತಾನೆ– ಕಥೆಯ ಈ ಭಾಗಗಳು ಹುಡುಗಿಯರು ಹೇಗಿರುತ್ತಾರೆ ಎಂಬ ಬಗ್ಗೆ ಸಾಸೊನ ಕಲ್ಪನೆಗಳು ಏನು ಎಂಬುದನ್ನು ಹೇಳಲು ನೆಪವಾಗುತ್ತವೆ. ಉದಾಹರಣೆಗೆ ಈ ಸುಂದರ ಉಡುಗೊರೆಗಳನ್ನು ನೋಡಿದಾಗ ಅವಳು ಏನು ಮಾಡಬಹುದು? ಅವಳು ಕೂಡಲೇ ಇವನ ತೋಳುಗಳೊಳಗೆ ಧುಮುಕಿ ಮುತ್ತಿಡುತ್ತಾಳೆ. ಹುಡುಗಿಯರು ಪ್ರಣಯಾಕಾಂಕ್ಷಿಗಳು ಎಂಬ ಬಗ್ಗೆ ಸಾಸೊಗೆ ಯಾವ ಸಂಶಯವೂ ಇರಲಿಲ್ಲ. ವಿದ್ಯಾರ್ಥಿಗಳು ಹುಡುಗಿಯರ ಕುರಿತಾದ ಸಾಸೊನ ಕಲ್ಪನೆಯನ್ನು ಪ್ರಶ್ನಿಸಿದರು ಮತ್ತು ಹುಡುಗಿಯರು ಬೇರೆ ರೀತಿಯಲ್ಲಿ ವರ್ತಿಸುವ ಉದಾಹರಣೆಗಳನ್ನು ಹಂಚಿಕೊಂಡರು. ಸಾಸೊ ತನ್ನ ತಾಯಿಯು ಭಾವುಕಳಾಗಿದ್ದನ್ನು ನೋಡಿರಬಹುದು ಅಥವಾ ಹುಡುಗಿಯರಿಗೆ ಉಡುಗೊರೆಗಳು ಇಷ್ಟ ಎಂಬುದನ್ನು ತನ್ನ ಗೆಳೆಯರಿಂದ ಕೇಳಿರಬಹುದು ಎಂಬುದನ್ನು ಅವರು ಗಣನೆಗೆ ತೆಗೆದುಕೊಂಡರು. ಹುಡುಗಿಯರು ಹೇಗಿರುತ್ತಾರೆ ಎಂಬ ಬಗ್ಗೆ ಸಾಸೊನ ತಿಳುವಳಿಕೆಯನ್ನು ಪ್ರಭಾವಿಸಿದ ಹೊರಗಿನ ಕಾರಣಗಳನ್ನು ನಾವೆಲ್ಲರೂ ಒತ್ತಿ ಹೇಳಿದೆವು. ನಂತರ ನಾವು ಇದನ್ನು ನಮ್ಮ ಬದುಕಿನೊಂದಿಗೆ ತಾಳೆ ಹಾಕಿಕೊಂಡು ನಮ್ಮ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರಿದ ಹೊರಗಿನ ಅಂಶಗಳ

ಬಗ್ಗೆ, ಎಂದರೆ ಚಲನಚಿತ್ರಗಳು, ಸ್ನೇಹಿತರು, ಕುಟುಂಬದ ಸದಸ್ಯರು ಇವೆಲ್ಲವುಗಳ ಬಗ್ಗೆ ಚರ್ಚಿಸಿದೆವು. ಕಥೆಯಲ್ಲಿ ಎದ್ದು ಕಾಣುವ ಅಂಶವೆಂದರೆ, ನಾವು ಸಾಸೊನನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವನು ಹುಡುಗಿಯರಲ್ಲಿ ಇದೆ ಎಂದುಕೊಳ್ಳುವ ಗುಣಗಳೆಲ್ಲವೂ ಅವನಲ್ಲೇ ಇರುವುದನ್ನು ಕಾಣಬಹುದು. ಅವನೂ ಪ್ರಣಯಾಕಾಂಕ್ಷಿ, ಪ್ರಯಾಣಮಧ್ಯದಲ್ಲಿ ತನ್ನ ಮಿತ್ರರಾದ ಪ್ರಾಣಿಗಳನ್ನು ಕೈಬಿಡಲಾರದ ಸೂಕ್ಷ್ಮ ಹೃದಯಿ ಮತ್ತು ಅವನು ನಾಚಿಕೆಯ ಸ್ವಭಾವದವನು ಕೂಡಾ. ಸೂಕ್ಷ್ಮ ಹೃದಯದವರಾಗಿರುವುದು, ಪ್ರಣಯಾಕಾಂಕ್ಷಿಗಳಾಗಿರುವುದು, ಸಂಕೋಚದ ಸ್ವಭಾವದವರಾಗಿರುವುದು ಇವೆಲ್ಲ ಯಾವುದೋ ಒಂದು ಲಿಂಗಕ್ಕೆ ಸೇರಿದವರಿಗೆ ಸೀಮಿತವಾದವಲ್ಲ. ಅವು ವಾಸ್ತವವಾಗಿ ಎಲ್ಲ ಲಿಂಗಿಗಳಲ್ಲೂ ಕಾಣಸಿಗುವ ಮಾನವೀಯ ಗುಣಗಳು. ಚರ್ಚೆಗೆ ಬಂದ ಮತ್ತೊಂದು ಆಸಕ್ತಿದಾಯಕ ವಿಷಯವೆಂದರೆ 'ಒಬ್ಬ ಹುಡುಗ ಮತ್ತು ಹುಡುಗಿ ಕೇವಲ ಸ್ನೇಹಿತರಾಗಿರಬಹುದೇ?' ಎಂಬುದು. ಹುಡುಗರು ಮತ್ತು ಹುಡುಗಿಯರಿಬ್ಬರೂ ಹೇಳಿದ್ದೆಂದರೆ ಹಾಗಾದಾಗ ಒಬ್ಬರ ಜೊತೆಗೆ ಇನ್ನೊಬ್ಬರ ಹೆಸರನ್ನು ಅಂಟಿಸಿ ಚುಡಾಯಿಸಲಾಗುತ್ತದೆ ಎಂದು. ಒಂದು ಅಥವಾ ಎರಡನೇ ತರಗತಿಯಲ್ಲಿ ಇದ್ದಾಗ ಅವರನ್ನು ಯಾರೂ ರೇಗಿಸುತ್ತಿರಲಿಲ್ಲ; ಹುಡುಗರು ಮತ್ತು ಹುಡುಗಿಯರು ಕೇವಲ ಗೆಳೆಯರಾಗೇ ಇದ್ದರು ಆದರೆ ವಯಸ್ಸಾದಂತೆ ಅದು ಬದಲಾಯಿತು. ವಿಭಿನ್ನ ಲಿಂಗಿಗಳ ನಡುವೆ ಒಂದು ನಿರ್ದಿಷ್ಟ ರೀತಿಯ ಸಂಬಂಧ ಮಾತ್ರ ಇರುವುದು ಸಾಧ್ಯ ಎಂಬುದನ್ನು ಪ್ರಚಾರ ಮಾಡುವಲ್ಲಿ ಮಾಧ್ಯಮದ ಪಾತ್ರವು ಬಹಳ ಬಲವಾಗಿದೆ ಎಂದು ಅನೇಕರು ಗುರುತಿಸಿದರು.ಅರ್ಥಮಾಡಿಕೊಳ್ಳಲು ಮತ್ತು ಸಂವಹನ ನಡೆಸಲು ಸುಲಭವಾಗಲೆಂದು ಎರಡೂ ಕಥೆಗಳನ್ನೂ ಮರಾಠಿಯಲ್ಲಿ (ಈ ಶಾಲೆಯಲ್ಲಿನ ವಿದ್ಯಾರ್ಥಿಗಳ ಮನೆ ಮಾತು ಅದು) ಓದಲಾಯಿತು. ಗಾಢವಾದ ಆಲೋಚನೆಗೆ ಹಚ್ಚುವ ವಾತಾವರಣವನ್ನು ಸೃಷ್ಟಿಸಲು ಕಥೆ ಹೇಳುವಾಗ ಮಧ್ಯದಲ್ಲಿ ಕೆಲವೊಂದು ಸೂಚನೆಗಳನ್ನೂ ನೀಡಲಾಯಿತು.

## ಸುರಕ್ಷಿತ ವಾತಾವರಣವನ್ನು ಸೃಷ್ಟಿಸುವತ್ತ

ದೇಹದ ಕುರಿತು, ಭಾವನೆಗಳ ಕುರಿತು ಮತ್ತು ವಿಭಿನ್ನ ಅಸ್ಮಿತೆಗಳ ಕುರಿತು ನಡೆಸಬೇಕಾದ ಸಂವಾದಗಳು ಮೇಲಿನ ಅನುಭವಗಳ ಪ್ರಕಾರ ಹಾಗೂ ಈಗಾಗಲೇ ಹೇಳಿರುವಂತೆ ಬೇಗನೆ ಆರಂಭವಾಗಬೇಕು. ವ್ಯಕ್ತಿಯು ಬೆಳೆಯುತ್ತಾ ಹೋದಂತೆ ತನ್ನ ದೇಹದ ಬಗ್ಗೆ ಏನನ್ನಿಸುತ್ತಿದೆ ಎಂದು ಹೇಳಿಕೊಳ್ಳಲು ಸೂಕ್ತ ಪದಸಂಪತ್ತು ಇರಬೇಕು. ಅಂತಹ ಮಾತುಕತೆಗಳು, ಒಪ್ಪಿಕೊಳ್ಳಬೇಕಾದ ಸಂಗತಿಗಳಿಗೆ ಅಡ್ಡಿಯಾಗುವ ಸ್ಥಾಪಿತ ಮಾದರಿಗಳ ಅಹಿತಕಾರಿ ಭಾವನೆಗಳಿಂದ ಬಿಡುಗಡೆ ಮಾಡಿ ಬಹಳ ಕಾಲದಿಂದಲೂ ಬಲವಂತವಾಗಿ ಅದುಮಿಟ್ಟ ಭಾವನೆಗಳನ್ನು ಹಾಗೂ ಅನುಭವಗಳನ್ನು ಹೊರಚೆಲ್ಲುತ್ತವೆ. ನಮಗೇನನ್ನಿಸುತ್ತದೋ ಅದನ್ನು ಅಭಿವ್ಯಕ್ತಿಸಲು ಅಡ್ಡಿಯಾಗುವುದೇ ಈ ಅಹಿತಕಾರಿ ಭಾವನೆಗಳು. ಉದಾಹರಣೆಗೆ ಹೇಳಬೇಕೆಂದರೆ, ನಾನು ಬೆಳೆಯುತ್ತಿದ್ದಾಗ ನನ್ನ ದೇಹದ ಬಗ್ಗೆ ನನಗೆ ಸಮಸ್ಯೆಗಳಿದ್ದವು. ನಾನು ಸುಂದರವಾಗಿದ್ದೇನೆ ಎಂದು ನನಗೆ ಎಂದಿಗೂ ಅನ್ನಿಸಿರಲೇ ಇಲ್ಲ, ಏಕೆಂದರೆ ನನ್ನ ದೇಹದ ಗಾತ್ರ ಮತ್ತು ಚರ್ಮದ ಬಣ್ಣ ಇವುಗಳು ಒಪ್ಪಿತ ಮಾದರಿಯಲ್ಲಿ ಇರಲಿಲ್ಲ. ನನಗೆ ಕಲಿಸಲಾಗಿದ್ದ ಸಾಮಾಜಿಕ ನಿರೂಪಣೆಗಳನ್ನು ಕೈಬಿಟ್ಟು ನಾನು ಹೇಗಿದ್ದೇನೋ ಹಾಗೆಯೇ ನನ್ನನ್ನು ನಾನು ಒಪ್ಪಿಕೊಳ್ಳಲು ಬಹಳ ಸಮಯ ಹಾಗೂ ಸತತ ಪ್ರಯತ್ನ ಬೇಕಾಯಿತು ಮತ್ತು ಅದು ಇನ್ನೂ ಮುಂದುವರೆಯುತ್ತಲೇ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ಆದರೆ ಅವುಗಳನ್ನು ಪರಿಹರಿಸಿಕೊಳ್ಳುವುದು ಸಾಧ್ಯವಾಗಬೇಕೆಂದರೆ ಮೊದಲಿಗೆ ನಾವು ಅವನ್ನು ಗುರುತಿಸಿಕೊಳ್ಳಬೇಕು. ಶಿಕ್ಷಕರಾದವರು ವಿದ್ಯಾರ್ಥಿಗಳಿಗೆ ಅಂತಹ ಅವಕಾಶವನ್ನು ಒದಗಿಸಿಕೊಡ–ಬೇಕೆಂದರೆ ಮೊದಲಿಗೆ ತಮ್ಮೊಳಗೆ ಅಂತಹ ಚಿಂತನ–ಮಂಥನ ಪ್ರಯಾಣವನ್ನು ಅವರು ಆರಂಭಿಸಬೇಕಾಗುತ್ತದೆ. ಶಿಕ್ಷಕರಾಗಿ ನಾವು ದೈನಂದಿನ ತರಗತಿಗಳಲ್ಲಿ ಸಿಎಸ್ಇ ಕುರಿತಾದ ವಿಷಯಗಳನ್ನು ಚರ್ಚೆಗೆ ತೊಡಗಿಕೊಳ್ಳಲಾರಂಭಿಸಬೇಕು. ಬೇರೆ ವಿಷಯಗಳೊಂದಿಗೆ ಇದನ್ನು ಸೇರಿಸಿಕೊಳ್ಳುವ ವಿಧಾನಗಳನ್ನು ನಾವು ಹುಡುಕಿಕೊಳ್ಳಲು ಸಾಧ್ಯವಿರುವುದರಿಂದ ಇದಕ್ಕಾಗಿ ಬೇರೆಯದೇ ಆದ ತರಗತಿ ಅವಧಿಯಾಗಲೀ, ಹೆಚ್ಚುವರಿ ಸಮಯವಾಗಲೀ ಅಗತ್ಯವಿರುವುದಿಲ್ಲ. ಕಥೆಪುಸ್ತಕಗಳು, ಕಿರುಚಿತ್ರಗಳು, ಫೋಟೊಗಳು ಮತ್ತು ಪದ್ಯಗಳು ಸಾಮಾಜಿಕ ವಿಷಯಗಳನ್ನು ಕುರಿತಂತೆ ಸಂವಾದವನ್ನು ಆರಂಭಿಸಲು ಪ್ರಚೋದಕಗಳಾಗುತ್ತವೆ. ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಸುಲಭವಾಗಿ ಸಿಗಬಲ್ಲಂತಹ ಸಂಪನ್ಮೂಲ ಸಾಮಗ್ರಿಯು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿರಲೇಬೇಕು. ಸ್ತ್ರೀವಾದಿ ದೃಷ್ಟಿಕೋನದಿಂದ ನೋಡಬಲ್ಲ ಪಠ್ಯಪುಸ್ತಕಗಳನ್ನು ಪಡೆದುಕೊಳ್ಳುವುದು ಒಂದು ಮುಖ್ಯವಾದ ಬದಲಾವಣೆಯಾಗುತ್ತದೆ. ಅದು ಪುಸ್ತಕದ ವಸ್ತು ಮತ್ತು ಉದಾಹರಣೆಗಳನ್ನು ಪರಿವರ್ತಿಸಿ ಅವುಗಳನ್ನು ಹೆಚ್ಚು ಒಳಗೊಳ್ಳುವ, ಸಮಗ್ರತೆಯುಳ್ಳದ್ದನ್ನಾಗಿ ಮತ್ತು ವಿಮರ್ಶಾತ್ಮಕವನ್ನಾಗಿ ಮಾಡುತ್ತದೆ; ತನ್ಮೂಲಕ ವಿಭಿನ್ನ ಸಾಮಾಜಿಕ ಅಸ್ಮಿತೆಗಳು, ಅಸಮಾನತೆಗಳು, ಪುರುಷತ್ವ ಮುಂತಾದ ಸಿಎಸ್ಇನಲ್ಲಿ ಬರುವ ವಸ್ತು ವಿಷಯಗಳ ಚರ್ಚೆಗೆ ತೊಡಗಿಕೊಳ್ಳಲು ಸುವ್ಯವಸ್ಥಿತವಾಗಿ ಅವಕಾಶವನ್ನು ಸೃಷ್ಟಿಸುತ್ತದೆ. ತಮ್ಮನ್ನು ಒಪ್ಪಿ ಸ್ವೀಕರಿಸಿಕೊಳ್ಳುವುದು, ತಮ್ಮ ದೇಹವನ್ನು ಮತ್ತು ಇತರರ ದೇಹವನ್ನು ಗೌರವಿಸುವುದು, ಇವುಗಳನ್ನು ಅರ್ಥಮಾಡಿಕೊಳ್ಳುವ ಪಯಣದಲ್ಲಿ ತೊಡಗಿಕೊಳ್ಳಲು ಸಮಗ್ರ ಲೈಂಗಿಕತೆಯ ಶಿಕ್ಷಣವು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತದೆ. ಇದು ಸಾಧ್ಯವಾಗುವುದು ಲೈಂಗಿಕತೆಯ ಶಿಕ್ಷಣವು ಸಾಮಾಜಿಕ ಖಂಡನೆಯಿಂದ, ಸರಿ–ತಪ್ಪು ಎಂಬ ದ್ವಿಮಾನ ಚಿಂತನೆಯಿಂದ ಮತ್ತು ಸರಿ ಅಥವಾ ತಪ್ಪು ಎಂಬ ಯಾವುದೋ ಒಂದು ಮಾರ್ಗಕ್ಕೆ ಅಂಟಿಕೊಳ್ಳಬೇಕೆಂಬ ಅನಾವಶ್ಯಕ ಹಪಾಹಪಿಯಿಂದ ಮುಕ್ತವಾದಾಗ ಮಾತ್ರ. ವಿದ್ಯಾರ್ಥಿಗಳೊಡನೆ ನಿರಂತರವಾಗಿ ಸಂವಾದ ನಡೆಸಿದಾಗ ಅವರು ತಮ್ಮ ದೇಹವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ತಮ್ಮ ತೀರ್ಮಾನಗಳ ಪರಿಣಾಮಗಳ ಬಗ್ಗೆ ಯೋಚಿಸುವ ಶಕ್ತಿಯನ್ನು ನೀಡಲು, ಬೇರೆಯವರ

ಸೀಮಾರೇಖೆಗಳನ್ನು ಗೌರವಿಸಲು ಮತ್ತು ಬದುಕಿನಲ್ಲಿ ಆರೋಗ್ಯವಂತ ಆಯ್ಕೆ ಮತ್ತು ನಿರ್ಣಯಗಳನ್ನು ಮಾಡಲು ಬೆಂಬಲ ನೀಡಿದಂತಾಗುತ್ತದೆ. ಕೇವಲ ಮಾಹಿತಿಗಳು ಸಾಕಾಗುವುದಿಲ್ಲ, ಮುಖ್ಯವಾದದ್ದೇನೆಂದರೆ ಇತರರ ಬಗ್ಗೆ ತೀರ್ಮಾನಗಳನ್ನು ರೂಪಿಸಿಕೊಳ್ಳದಿರುವುದು, ಒಳಗೊಳ್ಳುವಿಕೆ ಮತ್ತು ತನ್ನ ಹಾಗೂ ಇತರರ ಆಯ್ಕೆಗಳನ್ನು ಗೌರವಿಸುವುದು. ಸಂವಾದಕ್ಕಾಗಿ ಸುಭದ್ರ ವಾತಾವರಣವನ್ನು ಸೃಷ್ಟಿಸುವುದರಿಂದ ವಿದ್ಯಾರ್ಥಿಗಳು ಹೆಚ್ಚು ಆತ್ಮವಿಶ್ವಾಸವನ್ನು ಹೊಂದುತ್ತಾರೆ. ತಮ್ಮೊಂದಿಗೆ ಹೆಚ್ಚು ನೆಮ್ಮದಿಯಿಂದ ಇರುತ್ತಾರೆ ಮತ್ತು ಪ್ರಾಯಶಃ ತಮ್ಮ ಸುತ್ತಲಿನವರಿಗೂ ಅಂಥದೇ ಸಬಲೀಕರಿಸುವ ವಾತಾವರಣವನ್ನು ಒದಗಿಸುತ್ತಾರೆ.




**ಇಶಾ ಬಡ್ಕಸ್** ಅವರು ಕಳೆದ ಮೂರು ವರ್ಷಗಳಿಂದ 'ಏಕಲವ್ಯ'ದ ಜೊತೆ ಕೆಲಸ ಮಾಡುತ್ತಿದ್ದಾರೆ. ಅವರು ಸಾಮುದಾಯಿಕ ಶಿಕ್ಷಣ ಮತ್ತು ಶಿಕ್ಷಣ (Community Engagement and Education programme) ಕಾರ್ಯಕ್ರಮದ ಸಂಯೋಜಕರಾಗಿದ್ದು, ಬೆಂಗಳೂರಿನ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದಿಂದ ಶಿಕ್ಷಣದ ಕುರಿತು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಸಂವಾದಕ್ಕಾಗಿ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಲಿಂಗತ್ವ ಮತ್ತು ಲೈಂಗಿಕತೆ ಕುರಿತು ಪರಿಶೋಧನೆ ಕೈಗೊಳ್ಳುವುದರಲ್ಲಿ ಅವರಿಗೆ ಆಸಕ್ತಿ. ಅವರನ್ನು ishabadkas@eklavya.in ಇ–ಮೇಲ್ ಮೂಲಕ ಸಂಪರ್ಕಿಸಬಹುದು.


ಅನುವಾದ: **ಬಿ.ಆರ್.ಮಂಜುನಾಥ್** | ಪರಿಶೀಲನೆ: **ನಾಗಮಣಿ ಎಸ್.ಎನ್.**

ದೇವರಾಜ್ ಪಕ್ಕದಲ್ಲಿ ನಿಂತಿದ್ದ ಹುಡುಗಿಯೊಬ್ಬಳು ಅವನ ಕೈ ಮೇಲಿನ ತನ್ನ ಹಿಡಿತವು ಅವನಿಗೆ ಹೆಚ್ಚು ಆರಾಮದಾಯಕವಾಗುವಂತೆ ಸರಿಪಡಿಸಿಕೊಳ್ಳುತ್ತಿದ್ದುದನ್ನು ನಾನು ನೋಡಿದೆ. ಈ ಒಂದು ಸಹಜವಾದ ಸ್ನೇಹಮಯ ಕ್ರಿಯೆಯೊಂದಿಗೆ ಆಕೆಯು, ಸಮಾಜವು ವೈಕಲ್ಯತೆಗಳಿರುವ ವ್ಯಕ್ತಿಗಳನ್ನು ಉಳಿದ ಬೇರೆಯವರನ್ನು ನಡೆಸಿಕೊಳ್ಳುವಂತೆಯೇ ನಡೆಸಿಕೊಳ್ಳಲು ತನ್ನ ಧೋರಣೆಗಳನ್ನು ಸರಿಪಡಿಸಿಕೊಳ್ಳಬೇಕು ಎಂಬ ಸುಂದರವಾದ ಪಾಠವನ್ನು ಹೇಳುತ್ತಿದ್ದಾಳೆ ಎಂದು ನನಗನ್ನಿಸಿತು. ಪ್ರತಿಯೊಬ್ಬರಿಗೂ ವಿಭಿನ್ನ ಸಾಮರ್ಥ್ಯಗಳಿರುತ್ತವೆ; ಕೆಲವರು ಸುಂದರವಾಗಿ ನರ್ತಿಸುತ್ತಾರೆ, ಕೆಲವರು ಸುಶ್ರಾವ್ಯವಾಗಿ ಹಾಡುತ್ತಾರೆ. ಹೀಗಿರುವಾಗ ಕೆಲವರಿಗೆ "ವಿಭಿನ್ನ ಸಾಮರ್ಥ್ಯ ಹೊಂದಿದವರು" ಎಂದೇಕೆ ಹೆಸರಿಸಬೇಕು?

ಶೌರ್ಯ ಬಟಾರಿಯ, ವಿವಿಧ ಅಗತ್ಯಗಳನ್ನು ಹೊಂದಿರುವ ಮಕ್ಕಳು / ಶಿಕ್ಷಕರು ಏನು ಮಾಡಬಹುದು. ಪು–62